# ಮೂಕಜ್ಜಿಯ ಕನಸುಗಳು

(ಚಲನಚಿತ್ರ ಕಥಾಸಾರಾಂಶ)

ಡಾ.ಕೆ.ಶಿವರಾಮಕಾರಂತರ 'ಮೂಕಜ್ಜಿಯ ಕನಸುಗಳು' ಕಾದಂಬರಿ ರಚಿತವಾಗಿ ಇಲ್ಲಿಗೆ ಐವತ್ತು ವರ್ಷಗಳಾಗಿವೆ. 1977 ರಲ್ಲಿ ಈ ಕೃತಿಗೆ ಭಾರತದ 'ಜ್ಞಾನಪೀಠ' ಪ್ರಶಸ್ತಿ ಲಭಿಸಿದೆ. ಸುವರ್ಣ ಸಂಭ್ರಮದ ಈ ಕೃತಿಯನ್ನು ದೃಶ್ಯರೂಪಕ್ಕೆ ತರುವ ಪ್ರಯತ್ನದ ಫಲವೇ ಈ ಚಲನಚಿತ್ರ.

ಮೂಕಾಂಬಿಕೆಯದ್ದು ಬಾಲ್ಯವಿವಾಹ. ಲಗ್ನವಾದ ಕೆಲವೇ ದಿನಗಳಲ್ಲಿ ವಿಧವೆಯಾಗಿ ಮಡಿವಂತಿಕೆಯ ಕಟ್ಟಳೆಯಂತೆ ಕೆಂಪುಸೀರೆಯುಟ್ಟು ಮೂಲೆ ಸೇರುತ್ತಾಳೆ. ವ್ಯಾವಹಾರಿಕ ಜಗತ್ತಿನೊಂದಿಗೆ ತಪ್ಪಿದ ಸಂಪರ್ಕ, ತನ್ಮೂಲಕ ಪ್ರಾಪ್ತವಾದ ಏಕಾಂತತೆ ಹಾಗೂ ಎಳವೆಯಿಂದಲೇ ಬೆಳೆಸಿಕೊಂಡ ಸಂವೇದನಾ ಸಾಮರ್ಥ್ಯದಿಂದ ಆಕೆಗೆ ವಸ್ತುಗಳಾಚೆಯ ಸಂಗತಿಗಳು ಕಾಣಿಸತೊಡಗಿ ಅವನ್ನು ನಿರ್ಭಿಡೆಯಿಂದ ಹೇಳಿದ್ದರಿಂದ ಜನ 'ಮರುಳು' ಎಂಬ ಪಟ್ಟ ಕಟ್ಟಿ ಶಿಕ್ಷಿಸುತ್ತಾರೆ. ನೊಂದ ಮೂಕಾಂಬಿಕೆ ಲೌಕಿಕ ಜಗತ್ತಿನೊಂದಿಗೆ ಮಾತುಬಿಟ್ಟು ಮೂಕಿಯಾದವಳು; ವೃದ್ಧೆಯಾದಂತೆ ಮೂಕಜ್ಜಿಯಾಗುತ್ತಾಳೆ. ಈಗ ಮೂಕಜ್ಜಿ ಮೂಡೂರಿನಲ್ಲಿ ತನ್ನ ಸಂಬಂಧಿ ಸುಬ್ರಾಯನ ಆಶ್ರಯದಲ್ಲಿದ್ದಾಳೆ. ಮೂಕಜ್ಜಿಯನ್ನು ಎಲ್ಲರೂ ತಲೆ ಸಮ ಇಲ್ಲದವಳು ಎಂದು ತಿಳಿದಿದ್ದಾಗ, ಆಕೆಗಿರುವ ವಿಶೇಷ ಶಕ್ತಿಯನ್ನು ಚರಿತ್ರೆಯ ವಿದ್ಯಾರ್ಥಿಯಾಗಿರುವ ಸುಬ್ರಾಯ ಗುರುತಿಸಿ ತನಗೆ ಸಿಕ್ಕ ಪ್ರಾಚೀನ ವಸ್ತುಗಳನ್ನು ಅಜ್ಜಿಯ ಕೈಗಿಡುತ್ತಾನೆ. ಅದನ್ನು ಹಿಡಿದು ಕನಸು ಕಾಣುವ ಅಜ್ಜಿ ಪುರಾತನ ಜಗತ್ತನ್ನು ಬಿಚ್ಚಿಡುತ್ತಾಳೆ. ಭಾರತೀಯ ಬದುಕಿನಲ್ಲಿ ಪ್ರಕೃತಿಯ ಪಾತ್ರ, ದೇವರು, ವಿಗ್ರಹ ಪೂಜೆ, ಲೈಂಗಿಕ ಸಂಬಂಧಗಳ ವಿಕಾಸ, ಧರ್ಮಗಳ ಹುಟ್ಟು ಮತ್ತು ತಿಕ್ಕಾಟಗಳ ವಿಕೃತಿ, ಸುಕೃತಿಗಳ ವಿಶ್ಲೇಷಣೆ ನಡೆಸುತ್ತಾಳೆ. ಜೊತೆಗೆ ಚಿತ್ರದಲ್ಲಿ ಬೇರೆ ಉಪಕಥೆಗಳೂ ಇವೆ.

ಅದೇ ಊರಿನ ಗಾಣಿಗ ರಾಮಣ್ಣ ಮತ್ತು ಅವನ ಹೆಂಡತಿ ನಾಗಿಯ ಬದುಕಿನಲ್ಲಿ ಪ್ರವೇಶಿಸುವ ಶೀನಪ್ಪ ನಾಗಿಯನ್ನು ಮರುಳುಮಾಡಿ ಬಳಸಿಕೊಂಡು ಮಗುವಾದ ನಂತರ ಬೀದಿಪಾಲು ಮಾಡುತ್ತಾನೆ. ನಾಗಿ ಎದೆಗುಂದದೆ ಮಗಳನ್ನು ಬೆಳೆಸಿದ್ದಾಳೆ. ಅಪರಿಹಾರ್ಯವೆನಿಸಿದ್ದ ಘಟ್ಟವನ್ನು ಮುಟ್ಟಿದ್ದ ನಾಗಿ ಮತ್ತು ರಾಮಣ್ಣರ ಬದುಕಿನ ಒಡಕನ್ನು ಮುಚ್ಚಲು ಮೂಕಜ್ಜಿ ಯತ್ನ ನಡೆಸಿ ಅದರಲ್ಲಿ ಯಶಸ್ವಿಯಾಗುತ್ತಾಳೆ.

ಸುಬ್ರಾಯನ ಸ್ನೇಹಿತ ಜನಾರ್ಧನ ಎಡಬಿಡಂಗಿ ವಿದ್ಯಾವಂತ. ಹೆಣ್ಣುಗಳ ಜೊತೆ ಚಕ್ಕಂದವಾಡುತ್ತ ವಿವಾಹ ಜೀವನದ ಜವಾಬ್ದಾರಿಯಿಂದ ದೂರಸರಿಯುವ ಅವನ ಬದುಕಿನ ಪರಿಯನ್ನು ಅರಿತ ಮೂಕಜ್ಜಿ ಅವನನ್ನು ಎಚ್ಚರಿಸುತ್ತಾಳೆ.

ಜೀವನದಲ್ಲಿ ಹೆಣ್ಣಿನ ಸಂಬಂಧವನ್ನು ನಿರಾಕರಿಸುತ್ತಾ ಅಥವಾ ಆ ಬಗೆಯ ಸೋಗನ್ನು ಹಾಕುತ್ತಾ ಡೋಂಗಿ ವೇದಾಂತವನ್ನು ಮುಂದೆ ಮಾಡಿ ಸಮಯಕ್ಕೆ ತಕ್ಕಂತೆ ಪಾರಮಾರ್ಥ ಉಲ್ಲೇಖಿಸುವ ಅನಂತರಾಯನ ಒಳಗನ್ನು ಕಂಡ ಆಕೆ ಆತನಿಗೂ ರಾಮದಾಸನಿಗೂ ಇರುವ ಲೈಂಗಿಕ ಸಂಬಂಧವನ್ನು ಬಯಲಿಗೆಳೆಯುತ್ತಾಳೆ.

ಹೀಗೆ ಆಸ್ತಿಕಳೂ ಅಲ್ಲದ; ನಾಸ್ತಿಕಳೂ ಅಲ್ಲದ ಮೂಕಜ್ಜಿ ಅಸ್ತಿತ್ವವಾದಿಯಂತೆ ಮಾನವ ಮೌಲ್ಯಗಳನ್ನು ಮೆರೆಯುತ್ತಾ ಮನುಷ್ಯನ ಅನ್ವೇಷಕ ಪ್ರವೃತ್ತಿಯ ಮೂರ್ತರೂಪವಾಗಿದ್ದಾಳೆ.

---

ನಿರ್ದೇಶನ : **ಪಿ.ಶೇಷಾದ್ರಿ**

ನಿರ್ಮಾಣ : **ನವ್ಯಚಿತ್ರ ಕ್ರಿಯೇಷನ್ಸ್**